# ಕರ್ನಾಟಕದಲ್ಲಿ ಮಕ್ಕಳ ಮೇಲೆ ಕೋವಿಡ್-19 ಜಾಗತಿಕ ಪಿಡುಗಿನ ಪ್ರಭಾವ

## ಅ. ಹಿನ್ನೆಲೆ

ಕೋವಿಡ್-19 ಜಾಗತಿಕ ಪಿಡುಗು ಜಗತ್ತಿನಾದ್ಯಂತ ಜೀವನವನ್ನು ಸ್ಥಗಿತಗೊಳಿಸಿತ್ತು ಹಾಗೂ ಇದು ಅಭೂತಪೂರ್ವ ಸವಾಲುಗಳು ಮತ್ತು ಬಿಕ್ಕಟ್ಟುಗಳನ್ನು ಸೃಷ್ಟಿಸಿತು. ಜಾಗತಿಕ ಪಿಡುಗು ವಿಶೇಷವಾಗಿ ಮಕ್ಕಳ ಮೇಲೆ ಅತ್ಯಂತ ಹಾನಿಕಾರಕ ಪರಿಣಾಮವನ್ನು ಬೀರಿದೆ. ಮಕ್ಕಳ ಜೀವನ, ಸಂರಕ್ಷಣೆ, ಭಾಗವಹಿಸುವಿಕೆ ಮತ್ತು ಶಿಕ್ಷಣದ ಹಕ್ಕುಗಳನ್ನು ಪೂರೈಸುವಲ್ಲಿ ಸವಾಲುಗಳನ್ನು ಸೃಷ್ಟಿಸಿದೆ. ಈ ಸನ್ನಿವೇಶದಲ್ಲಿ, ಗ್ರಾಮೀಣ ಮಕ್ಕಳ ಜೀವನ ಮತ್ತು ಶಿಕ್ಷಣದ ಮೇಲೆ ಇನ್ನೂ ಪ್ರಭಾವ ಬೀರುತ್ತಿರುವ ಜಾಗತಿಕ ಪಿಡುಗಿನ ಪ್ರಭಾವವನ್ನು ಪರಿಶೀಲಿಸಿ ಅಧ್ಯಯನ ಮಾಡುವ ಜವಾಬ್ದಾರಿಯನ್ನು ಟಾಟಾ ಟ್ರಸ್ಟ್ ಸಂಸ್ಥೆಯು ಸೆಂಟರ್ ಫಾರ್ ಸೋಷಿಯಲ್ ಡೆವೆಲಪ್‌ಮೆಂಟ್ (CSD) ಸಂಸ್ಥೆಗೆ ನೀಡಿತು. ಜಾರ್ಖಂಡ್, ಕರ್ನಾಟಕ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಈ ಅಧ್ಯಯನ ನಡೆಯಿತು. ವಿಶ್ವ ಪಿಡುಗಿನ ನಂತರದ ಕಾಲಮಾನದಲ್ಲಿ ಮಕ್ಕಳು ತಮ್ಮ ಶಾಲಾ ಕಲಿಕೆಯನ್ನು ಆತ್ಮವಿಶ್ವಾಸದಿಂದ ಯಶಸ್ವಿಯಾಗಿ ಪುನರಾರಂಭಿಸಲು ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಯೋಜನೆಯನ್ನು ಕ್ಷೇತ್ರದಲ್ಲಿ ದೊರಕಿದ ಒಳನೋಟಗಳ ಆಧಾರದ ಮೇಲೆ ಈ ಅಧ್ಯಯನವು ಶಿಫಾರಸ್ಸು ಮಾಡಿದೆ.

ಕರ್ನಾಟಕದ ಯಾದಗಿರಿ ಜಿಲ್ಲೆಯ ಯಾದಗಿರಿ ಬ್ಲಾಕ್ ಮತ್ತು ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಕುಷ್ಟಗಿ ಬ್ಲಾಕ್‌ಗಳಲ್ಲಿ ಫೆಬ್ರುವರಿ ತಿಂಗಳ ಮಧ್ಯದ ಕಾಲಾವಧಿಯಲ್ಲಿ ಪ್ರಾಥಮಿಕ ಸಮೀಕ್ಷೆಯನ್ನು ನಡೆಸಲಾಯಿತು. ಮಾಹಿತಿ ಸಂಗ್ರಹಣೆಗಾಗಿ ಸಮೀಕ್ಷೆ ಅನುಸೂಚಿ, ಕೇಂದ್ರೀಕೃತ ಗುಂಪು ಚರ್ಚೆ (FGD), ಮತ್ತು ಮುಕ್ತಾಂತ ಸಂದರ್ಶನಗಳ ಉಪಕರಣಗಳನ್ನು ಬಳಸಲಾಯಿತು. 300 ಪೋಷಕರು, 300 ಮಕ್ಕಳು, 30 ಶಿಕ್ಷಕರು, 30 ಅಂಗನವಾಡಿ ಕಾರ್ಯಕರ್ತರು, 3 ಶಾಲೆಗಳು ಹಾಗೂ ಇನ್ನಿತರ ಆಸಕ್ತ ಭಾಗೀದಾರರಾದ ಸರ್ಕಾರೀ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳು, ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ (ಎಸ್ ಡಿ ಎಂ ಸಿ) ಸದಸ್ಯರು ಮತ್ತು ಚುನಾಯಿತ ಪಂಚಾಯತ್ ಪ್ರತಿನಿಧಿಗಳಿಂದ ಮಾಹಿತಿ ಸಂಗ್ರಹಣೆ ಮಾಡಲಾಯಿತು. ಅಧ್ಯಯನದ ಮುಖ್ಯ ಫಲಿತಗಳನ್ನು ಇಲ್ಲಿ ಚರ್ಚಿಸಲಾಗಿದೆ.

## ಆ. ಮುಖ್ಯ ಫಲಿತಗಳು

### I. ಕುಟುಂಬ ಮತ್ತು ಮಕ್ಕಳ ಮೇಲೆ ಜಾಗತಿಕ ಪಿಡುಗಿನ ಪರಿಣಾಮ

- *ಸಾಮಾಜಿಕ-ಆರ್ಥಿಕ ಪ್ರಭಾವ*: ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳೆರಡರಲ್ಲೂ ಬಹುತೇಕ ಪೋಷಕರು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಕೃಷಿ ಚಟುವಟಿಕೆಗಳು ಇಲ್ಲದಿರುವ ಸಮಯದಲ್ಲಿ ಇವರು ಕೆಲಸದ ಸಲುವಾಗಿ ಬೆಂಗಳೂರು, ಹೈದರಾಬಾದ್, ಪುಣೆ, ಮುಂಬೈಗಳಂತಹ ನಗರಗಳಿಗೆ ವಲಸೆ ಹೋಗುತ್ತಾರೆ. ಮೊದಲನೆಯ ಲಾಕ್‌ಡೌನ್‌ನಿಂದ ನಿರುದ್ಯೋಗ ಸಂಖ್ಯೆಯಲ್ಲಿ ತೀವ್ರ ಹೆಚ್ಚಳವಿತ್ತು. ಸರಾಸರಿ, 10 ರಲ್ಲಿ 8 ಪೋಷಕರು ತಮ್ಮ ಜೀವನಾಧಾರವಾಗಿದ್ದ ಉದ್ಯೋಗವನ್ನು ಕಳೆದುಕೊಂಡಿದ್ದೇವೆಂದು ಹಾಗೂ ಅನೇಕ ಕುಟುಂಬಗಳು ತಮ್ಮ ಒಟ್ಟು ಆದಾಯ ಕಡಿಮೆಯಾಗಿದೆಯೆಂದು ವರದಿ ಮಾಡಿದರು.
- *ಮಕ್ಕಳ ಮೇಲಿನ ಪ್ರಭಾವ:* ಕುಟುಂಬಕ್ಕೆ ಎದುರಾದ ಪ್ರತಿಕೂಲ ಪರಿಸ್ಥಿತಿಯಿಂದ ಮಕ್ಕಳ ಮೇಲೆ ನೇತ್ಯಾತ್ಮಕ ಪ್ರಭಾವವಿದೆ ಹಾಗೂ ತಾವು ಜೀವನಾಧಾರ ಕಳೆದುಕೊಂಡೆವು ಎಂದು ಹೇಳಿದ ಕುಟುಂಬಗಳಿಂದಲೇ ಆರು ಮಕ್ಕಳು ಶಾಲೆಯಿಂದ ಹೊರಬಿದ್ದರೆನ್ನುವ ವರದಿ ದೊರಕಿತು. ಕುಟುಂಬದ ಆದಾಯಕ್ಕೆ ಕೊಡುಗೆ ನೀಡಲು ಅಥವಾ ತಮ್ಮ-ತಂಗಿಯರ ಪೋಷಣೆ ಮತ್ತು ಮನೆಯ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಿದ್ದರಿಂದ ಈ ಮಕ್ಕಳು ಶಾಲೆಯಿಂದ ಹೊರಬೀಳಲೇಬೇಕಾದ ಪರಿಸ್ಥಿತಿ ಉಂಟಾಯಿತು. ಶಾಲೆಗಳು ಮುಚ್ಚಿದ

ಸಂದರ್ಭದಲ್ಲಿ ಮಕ್ಕಳು ಹತ್ತಿ ಕೀಳುವಿಕೆ, ಕಳೆ ಕೀಳುವಿಕೆ, ನೀರು ಹಾಕುವಂತಹ ಕೆಲಸಗಳಲ್ಲಿ ತೊಡಗಿಕೊಂಡಿದ್ದರು ಮತ್ತು ಇನ್ನು ಕೆಲವರು ಹಣ್ಣು ತರಕಾರಿ ಮಾರಾಟ ಅಥವಾ ದಿನಸಿ ಅಂಗಡಿಯ ನಿರ್ವಹಣೆ ಮಾಡುತ್ತಿದರೆಂದು ಪ್ರತೀ 10 ರಲ್ಲಿ 6 ಪೋಷಕರು ಹೇಳಿದ್ದಾರೆ.

- *ಲಿಂಗ ಭೇದಗಳು:* ಹುಡುಗರು ಮತ್ತು ಹುಡುಗಿಯರು ಮಾಡುವ ಕೆಲಸಗಳಲ್ಲಿ ಲಿಂಗಬೇಧವನ್ನು ಸಹ ಗಮನಿಸಲಾಯಿತು. ಹುಡುಗಿಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹುಡುಗರು ಹೊರಗೆ ಓಡಾಡುವ ಮತ್ತು ಆದಾಯ ತರುವ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೆ, ಹುಡುಗಿಯರು ಅಡುಗೆ, ಶುಚಿ ಮಾಡುವ ಮತ್ತು ತೊಳೆಯುವಂತಹ ಕೆಲಸಗಳಿಗೆ ಸೀಮಿತಗೊಂಡಿದ್ದರು.
- *ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆ:* ಮಕ್ಕಳ ದಿನನಿತ್ಯದ ರೂಢಿಗಳಲ್ಲಿ ವ್ಯತ್ಯಯಗಳು ಇದ್ದಿದ್ದರಿಂದ ಮಕ್ಕಳ ಊಟದ ಕ್ರಮ ಅಸ್ತವ್ಯಸ್ತಗೊಂಡು, ಅವರು ಮಾಮೂಲಿಗಿಂತ ಹೆಚ್ಚು ಅಥವಾ ಕಡಿಮೆ ಆಹಾರವನ್ನು ಸೇವಿಸುತ್ತಿದ್ದರು, ಯಾದಗಿರಿ ಜಿಲ್ಲೆಯಲ್ಲಿ ಮಾಮೂಲಿಗಿಂತ ಕಡಿಮೆ ಆಹಾರ ಸೇವನೆಯಾದದ್ದು ಕಂಡು ಬಂದಿತು ಮತ್ತು ಕುಷ್ಟಗಿಯಲ್ಲಿ ಆಹಾರ ಸೇವನೆ ಹೆಚ್ಚಿತೆನ್ನುವ ವರದಿಗಳು ಬಂದವು. ಮೊದಲನೇ ಲಾಕಡೌನ್ ಪ್ರಾರಂಭಿಕ ಹಂತದಲ್ಲಿ ಮಕ್ಕಳಿಗೆ ಪೌಷ್ಟಿಕಾಂಶ ಪೂರೈಸುವ ಕುರಿತು ಸರ್ಕಾರ ಒತ್ತು ನೀಡಲಿಲ್ಲ. ಆದರೆ ನಂತರದ ಹಂತಗಳಲ್ಲಿ ಇದನ್ನು ಸರಿಪಡಿಸಲಾಯಿತು. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಲಾಕ್‌ಡೌನ್ ಅವಧಿಯಲ್ಲಿ ವ್ಯವಸ್ಥಿತವಾಗಿ ಕಾಲಕಾಲಕ್ಕೆ ಒಣ ಪಡಿತರ, ಮೊಟ್ಟೆ ಮತ್ತು ಬಾಳೆಹಣ್ಣುಗಳನ್ನು ವಿತರಿಸುತ್ತಿದ್ದೆವು ಎಂದು ಅಂಗನವಾಡಿ ಕಾರ್ಯಕರ್ತರು ಹೇಳಿದರು. ಆದರೆ ಇದು ತಮಗೆ ತಲುಪಿದೆಯೆಂದು ಶೇಕಡಾ 7 ಪೋಷಕರು ಮಾತ್ರ ತಿಳಿಸಿದರು. ಶಾಲೆಗಳು ಮುಚ್ಚಿದ್ದಾಗ ಅಲ್ಲಿ ಒಣ ಪಡಿತರ ವಿತರಣೆಯ ರೂಪದಲ್ಲಿ ಮಧ್ಯಾಹ್ನದ ಬಿಸಿ ಊಟವನ್ನು ನೀಡಲಾಗಿತ್ತು. ಮುಕ್ಕಾಲರಷ್ಟು ಪೋಷಕರು ತಮಗೆ ಮನೆಗೊಯ್ಯುವ ಪಡಿತರವು (take-home ration - THR) ಕ್ರಮಬದ್ಧವಾಗಿ ದೊರಕುತ್ತಿತ್ತೆಂದು ತಿಳಿಸಿದರು.
- *ಮಕ್ಕಳ ಯೋಗಕ್ಷೇಮ:* ಮಕ್ಕಳ ಮಾನಸಿಕ ಒತ್ತಡದ ಮಟ್ಟ ಹಾಗೂ ಆತಂಕ ಹೆಚ್ಚಾಗಿದೆಯೆಂದು ಯಾದಗಿರಿ ಬ್ಲಾಕ್‌ನ 70 ಶೇಕಡಾ ಪೋಷಕರು ಹೇಳಿದರು. ತಮ್ಮ ಮಕ್ಕಳ ದೈಹಿಕ ಚಟುವಟಿಕೆಗಳು ಬಹಳಷ್ಟು ಕಡಿಮೆಯಾಗಿದೆಯೆಂದು ಕೊಪ್ಪಳ ಬ್ಲಾಕ್‌ನ 57 ಶೇಕಡಾ ಪೋಷಕರು ಚಿಂತೆಗೀಡಾಗಿದ್ದರು. ತಮ್ಮ ಮಕ್ಕಳ ಸಾಮಾಜಿಕ ಒಡನಾಟ ಕ್ರಿಯೆಗಳ ಮೇಲೆ ಅಡ್ಡ ಪರಿಣಾಮವಿದೆ ಎಂದು ಕೊಪ್ಪಳ ಬ್ಲಾಕ್‌ನ 48 ಶೇಕಡಾ ಪೋಷಕರು ದೂರುತ್ತಿದ್ದರು. ಮಕ್ಕಳ ಯೋಗಕ್ಷೇಮದ ಮೇಲೆ ಇಷ್ಟೆಲ್ಲಾ ನೇತ್ಯಾತ್ಮಕ ಪ್ರಭಾವಗಳಿದ್ದರೂ, ಶಾಲೆಗಳು ಮುಚ್ಚಿದ ದಿನಗಳಲ್ಲಿ ಮಕ್ಕಳ ಜೊತೆಗಿನ ತಮ್ಮ ಸಂಬಂಧ ಸುಧಾರಿಸಿತೆಂದು 10 ಶೇಕಡಾ ಪೋಷಕರು ದೃಢತೆಯಿಂದ ಹೇಳಿದರು.
- *ಮಕ್ಕಳ ಸಂರಕ್ಷಣೆ:* ಕೋವಿಡ್-19ರ ಕಾರಣದಿಂದ ತಂದೆ ಅಥವಾ ತಾಯಿ ಅಥವಾ ತಂದೆ ತಾಯಿರಿಬ್ಬರೂ ನಿಧನ ಹೊಂದಿದ ಮಕ್ಕಳಿಗೆ ಆರ್ಥಿಕ ಬೆಂಬಲವನ್ನು ನೀಡಲಾಯಿತೆಂದು ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಯ ಮಕ್ಕಳ ಸಂರಕ್ಷಣಾ ಅಧಿಕಾರಿಗಳು ಹೇಳಿಕೆ ನೀಡಿದರು. ಆದರೆ, ನೆರವಿನ ಪ್ಯಾಕೆಜ್‌ನ ಮಾನದಂಡಗಳು ಬಹಳ ಕಟ್ಟುನಿಟ್ಟಾದ ಕಾರಣದಿಂದ ಅನೇಕ ಮಕ್ಕಳಿಗೆ ಇದು ದೊರೆಯಲಿಲ್ಲ. ಜಾಗತಿಕ ಪಿಡುಗಿನ ನಂತರದ ದಿನಗಳಲ್ಲಿ ಮನೆಯಲ್ಲಿ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲಾರದ ಕಾರಣ ಬಾಲ್ಯ ವಿವಾಹಗಳು ಹೆಚ್ಚಾಗಿವೆಯೆಂದು ಪೋಷಕರು ಕೇಂದೀಕೃತ ಗುಂಪು ಚರ್ಚೆಯಲ್ಲಿ ತಿಳಿಸಿದರು. ಶಾಲೆಗಳು ವ್ಯವಸ್ಥಿತವಾಗಿ ನಡೆಯುತ್ತಿರುವಾಗ ಹೆಣ್ಣು ಮಕ್ಕಳು ಸುರಕ್ಷಿತರಾಗಿದ್ದರೆಂದು ಪೋಷಕರು ಹೇಳಿದರು. ಶಾಲೆಗಳು ಮುಚ್ಚಿದ್ದ ಅವಧಿಯಲ್ಲಿ ಅನಪೇಕ್ಷಿತ ಬಸುರು ಹೆಚ್ಚಾಗಿತ್ತೆಂದು ಮಕ್ಕಳ ಸಂರಕ್ಷಣಾ ಅಧಿಕಾರಿಗಳು ವರದಿ ಮಾಡಿದರು.

## II. ಮಕ್ಕಳ ಶಿಕ್ಷಣದ ಮೇಲೆ ಜಾಗತಿಕ ಪಿಡುಗಿನ ಪರಿಣಾಮ

### *1. ಶಾಲೆ ಮುಚ್ಚಿದ ಸಂದರ್ಭದಲ್ಲಿ ಶಿಕ್ಷಣ*

- *ಶಾಲೆ ಮುಚ್ಚಿದ್ದರ ಪರಿಣಾಮ:* ಮಾರ್ಚ್ 2020 ರಿಂದ ಸೆಪ್ಟೆಂಬರ್ 2021 ರವರೆಗೆ ಸುಮಾರು 18 ತಿಂಗಳುಗಳ ಕಾಲ ಶಾಲೆಗಳು ಮುಚ್ಚಿದ್ದವು. ಇದರಿಂದ ಮಕ್ಕಳ ಶಿಕ್ಷಣದ ಮೇಲೆ ತೀವ್ರ ಪರಿಣಾಮವಿತ್ತು, ಅವರ ಶಿಸ್ತು, ದಿನಚರಿ ಮತ್ತು ಶಿಕ್ಷಣ ಎಲ್ಲವೂ ಅಸ್ತವ್ಯಸ್ತಗೊಂಡವು. ಜಾಗತಿಕ ಪಿಡುಗಿನ ಕಾರಣದಿಂದ ಶಾಲೆ ಮುಚ್ಚಿದ್ದರಿಂದ ತಮ್ಮ ಮಕ್ಕಳ ಶಿಕ್ಷಣದ ಮೇಲೆ ಅಡ್ಡ ಪರಿಣಾಮಗಳಿವೆಯೆಂದು ಮುಕ್ಕಾಲು ಪಾಲಿಗಿಂತ ಹೆಚ್ಚಿನ

ಪೋಷಕರು ಹೇಳಿದರು. ಚಂಚಲತೆ, ಸಣ್ಣ-ಪುಟ್ಟ ಕೆಲಸಗಳು ಮತ್ತು ಮನೆಯಲ್ಲಿ ಮೇಲ್ವಿಚಾರಣೆ ಇಲ್ಲದಿರುವಂತಹ ಅಂಶಗಳು ಮಕ್ಕಳ ಶಿಕ್ಷಣದ ಮೇಲೆ ಪ್ರಭಾವ ಬೀರಿವೆ.

- *ಶಾಲಾ ಮೂಲಭೂತ ಸೌಕರ್ಯಗಳಲ್ಲಿ ಏರುಪೇರು:* ಶಾಲೆ ದೀರ್ಘಕಾಲ ಮುಚ್ಚಿದ್ದರಿಂದ ಶಾಲಾ ಮೂಲಭೂತ ಸೌಕರ್ಯದಲ್ಲಿ ಏರುಪೇರಾಗಿದೆ. ಶಾಲಾ ಶೌಚಾಲಯಗಳ ಹದಗೆಟ್ಟ ಪರಿಸ್ಥಿತಿಯ ಬಗ್ಗೆ 18 ಶೇಕಡಾ ಪೋಷಕರು ಕಳವಳ ವ್ಯಕ್ತ ಪಡಿಸಿದರು. ಶಾಲಾ ತರಗತಿಗಳ ಹದಗೆಟ್ಟ ಪರಿಸ್ಥಿತಿಯ ಕುರಿತು ಮತ್ತು ಶಾಲೆಯ ಸುತ್ತಲಿನ ಗೋಡೆಗಳಲ್ಲಿ ಬಿರುಕುಗಳಿವೆಯೆಂದು 7 ಶೇಕಡಾ ಮತ್ತು 6 ಶೇಕಡಾ ಪೋಷಕರು ವರದಿ ಮಾಡಿದರು.
- *ಶಿಕ್ಷಕರ ಕೊರತೆ:* ಸಮೀಕ್ಷೆ ನಡೆಸಿದ ಶಾಲೆಗಳಲ್ಲಿ ಮೊದಲೇ ಶಿಕ್ಷಕರ ಕೊರತೆಯಿತ್ತು ಮತ್ತು ಇದರಿಂದ ಮಕ್ಕಳ ಕಲಿಕೆಯ ಮೇಲೆ ಪರಿಣಾಮಗಳಿದ್ದವು. ಜಾಗತಿಕ ಪಿಡುಗು ಈ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿತು. ಈ ಸವಾಲನ್ನು ಎದುರಿಸಲು, ಕೆಲವು ಕಡೆ ಶಿಕ್ಷಕರನ್ನು ಗುತ್ತಿಗೆಯ ಮೇಲೆ ನೇಮಕ ಮಾಡಿಕೊಂಡು, ಇವರ ವೇತನದ ವ್ಯವಸ್ಥೆಯನ್ನು ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಅಥವಾ ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತಿದ್ದವು. ಶಾಲೆಗಳು ಮುಚ್ಚಿದ ಸಮಯದಲ್ಲಿ ಖಾಸಗಿ ಶಾಲೆಗಳು ಸಹ ಶಿಕ್ಷಕರ ಕೊರತೆಯನ್ನು ಎದುರಿಸಬೇಕಾಯಿತು ಏಕೆಂದರೆ ಆಡಳಿತ ಮಂಡಳಿಗಳು ಶಿಕ್ಷಕರಿಗೆ ವೇತನ ನೀಡಲಾಗದೆ ಅವರನ್ನು ಉದ್ಯೋಗದಿಂದ ವಜಾ ಮಾಡಬೇಕಾಯಿತು.
- *ಶಾಲೆ ಮುಚ್ಚಿದ ಸಮಯದಲ್ಲಿ ಶಿಕ್ಷಕರ ಚಟುವಟಿಕೆಗಳು:* ಅರ್ಧಕ್ಕಿಂತ ಹೆಚ್ಚು ಶಿಕ್ಷಕರು ಕೋವಿಡ್-19 ಲಸಿಕೆ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದರು ಹಾಗೂ ಅವರಿಗೆ ನಿಗದಿತ ಸಂಖ್ಯೆಗಳನ್ನು ಮುಟ್ಟಲೇ ಬೇಕೆನ್ನುವ ಆದೇಶವಿತ್ತು. ಶೈಕ್ಷಣಿಕ ವಿಷಯವಸ್ತು, ಯೂಟ್ಯೂಬ್ ಲಿಂಕ್‌ಗಳು ಮತ್ತು ಚಟುವಟಿಕೆಗಳನ್ನು ವಾಟ್ಸ್ಯಾಪ್ ಮೂಲಕ ಕಳುಹಿಸುತ್ತಿದ್ದೆವು ಎಂದು 80 ಶೇಕಡಾಗಿಂತ ಹೆಚ್ಚಿನ ಶಿಕ್ಷಕರು ಹೇಳಿದರು. ತಮ್ಮ ವಿದ್ಯಾರ್ಥಿಗಳ ಶೈಕ್ಷಣಿಕ ಪರಿಸ್ಥಿತಿಯನ್ನು ಅರಿತುಕೊಳ್ಳಲು 30 ಶೇಕಡಾ ಶಿಕ್ಷಕರು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡುತ್ತಿದ್ದರು. ಮಕ್ಕಳು ನಾಪತ್ತೆಯಾದ್ದರಿಂದ ಹಾಗೂ ಅವರ ಮೊಬೈಲ್ ಸಂಖ್ಯೆ ಕೂಡ ದೊರಕದ ಕಾರಣದಿಂದ, ಬೋಧನಾ ಚಟುವಟಿಕೆಗಳಲ್ಲಿ ತಾವು ತೊಡಗಿಕೊಳ್ಳಲು ಸಾಧ್ಯವಾಗಲಿಲ್ಲವೆಂದು 10 ಶೇಕಡಾ ಶಿಕ್ಷಕರು ಹೇಳಿದರು.
- *ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ:* ಶಾಲೆ ಮುಚ್ಚಿದ ಅವಧಿಯಲ್ಲಿ ಕೋವಿಡ್-19 ಘಟ್ಟವನ್ನು ನಿಭಾಯಿಸುವುದರ ಬಗ್ಗೆ ಮತ್ತು ಜಾಗತಿಕ ಪಿಡುಗಿನ ಸಮಯದಲ್ಲಿ ಮಕ್ಕಳನ್ನು ಸಂಪರ್ಕ ಮಾಡುವ ಬಗ್ಗೆ ಯಾವುದೇ ರೀತಿಯ ತರಬೇತಿ ತಮಗೆ ದೊರಕಿತು ಎಂದು ಯಾವ ಶಿಕ್ಷಕರೂ ಹೇಳಲಿಲ್ಲ. ಆದರೆ, ಕೆಲವು ಶಿಕ್ಷಕರು ಸ್ವಯಂ ತಮ್ಮದೇ ಇರಾದೆಯ ಮೇರೆಗೆ, ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ (NISHTHA) ಪೋರ್ಟಲ್‌ನಲ್ಲಿ ಲಭ್ಯವಿರುವ ತರಬೇತಿಗಳನ್ನು ತೆಗೆದುಕೊಂಡರು. ಸ್ವಲ್ಪ ಸಮಯದ ನಂತರ ವಿದ್ಯಾಗಮ ತರಗತಿಗಳ ಸಂಘಟನೆಯ ಕುರಿತು ಸೂಚನೆಗಳನ್ನು ನೀಡಲಾಯಿತು ಆದರೆ ಅದನ್ನು ನಿರ್ವಹಿಸಲು ಯಾವುದೇ ರೀತಿಯ ತರಬೇತಿಗಳನ್ನಲ್ಲ.

## 2. ಶಾಲೆ ಮುಚ್ಚಿದ್ದಾಗ ಕಲಿಕೆ

- *ಡಿಜಿಟಲ್ ಶಿಕ್ಷಣ ಸುಲಭಲಭ್ಯತೆಯಿದ್ದ ಮಕ್ಕಳ ಕಲಿಕೆ:* ಡಿಜಿಟಲ್ ಶಿಕ್ಷಣವು ಕೇವಲ 30 ಶೇಕಡಾ ಮಕ್ಕಳಿಗೆ ಮಾತ್ರ ಸುಲಭಲಭ್ಯವಾಗಿತ್ತು (access). ಇವರಲ್ಲಿ 70 ಶೇಕಡಾ ಮಕ್ಕಳು ಆನ್‌ಲೈನ್ ಕಲಿಕಾ ಅನುಭವ ಚನ್ನಾಗಿರಲಿಲ್ಲವೆಂದು ಹೇಳಿದರು. ಅನ್‌ಲೈನ್ ಕಲಿಕೆಯಲ್ಲಿ ಪರದೆ-ಸಮಯದ (screen time) ಹೆಚ್ಚಳ ಮತ್ತು ಮಕ್ಕಳು ಅನುಚಿತ ವಿಷಯಗಳಿಗೆ ತೆರೆದುಕೊಳ್ಳುವುದು ದೊಡ್ಡ ಸವಾಲಾಗಿತ್ತು. ಇದನ್ನು ಯಾದಗಿರಿಯ 90 ಶೇಕಡಾ ಪೋಷಕರು ದೃಢೀಕರಿಸಿದರು. ಕೊಪ್ಪಳದಲ್ಲಿ, ಆನ್‌ಲೈನ್ ತರಗತಿ ನಡೆಸಲು ಅಗತ್ಯವಿರುವ ಡಿಜಿಟಲ್ ಕೌಶಲ ತಮಗಿರಲಿಲ್ಲವೆಂದು 50 ಶೇಕಡಾ ಶಿಕ್ಷಕರು ಒಪ್ಪಿಕೊಂಡರು. ಡಿಜಿಟಲ್ ಕೌಶಲಗಳಿದ್ದ ಇತರ ಶಿಕ್ಷಕರು ತಮ್ಮ ತರಬೇತಿಗಾಗಿ ಆನ್‌ಲೈನ್ ವೇದಿಕೆ ಬಳಸಿಕೊಂಡರು ಆದರೆ ಮಕ್ಕಳ ಕಲಿಕೆಗೆ ಇದು ಸೂಕ್ತವಲ್ಲವೆನ್ನುವ ಭಾವನೆಯನ್ನು ವ್ಯಕ್ತಪಡಿಸಿದರು.

- *ಡಿಜಿಟಲ್ ಶಿಕ್ಷಣ ಸುಲಭಲಭ್ಯವಿಲ್ಲದ ಮಕ್ಕಳ ಕಲಿಕೆ:* 70 ಶೇಕಡಾ ಮಕ್ಕಳಿಗೆ ಡಿಜಿಟಲ್ ಶಿಕ್ಷಣ ಸುಲಭಲಭ್ಯವಿರಲಿಲ್ಲ. ಶಿಕ್ಷಕರು ಮತ್ತು ಸರ್ಕಾರೇತರ ಸಂಸ್ಥೆಗಳು ಈ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾಗಮ ತರಗತಿಗಳು, ಸಮುದಾಯ ಕಲಿಕಾ ಕೇಂದ್ರಗಳು ಮತ್ತು ಟ್ಯೂಷನ್ ಕೇಂದ್ರಗಳನ್ನು ಆಯ್ದುಕೊಂಡವು. ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಪಾಳಿಗಳಲ್ಲಿ ಎರಡು ಗಂಟೆ ಅವಧಿಯ ತರಗತಿಗಳನ್ನು ಟಾಟಾ ಟ್ರಸ್ಟ್‌ನ ಸ್ವಯಂ ಸೇವಕರು ನಡೆಸುತ್ತಿದ್ದರು. ಶಾಲೆ ಮುಚ್ಚಿದ್ದಾಗ ಓದಲೇ ಇಲ್ಲವೆಂದು 3 ಶೇಕಡಾ ಮಕ್ಕಳು ಹೇಳಿದರು. ಆದರೆ 70 ಶೇಕಡಾ ಮಕ್ಕಳು ಎರಡು ಗಂಟೆಗಳಿಗಿಂತ ಕಡಿಮೆ ಸಮಯ ಅಧ್ಯಯನದಲ್ಲಿ ತೊಡಗಿಕೊಂಡಿದ್ದೆವೆಂದು ಹೇಳಿದರು. ಒಟ್ಟಾರೆ, ಕೇವಲ ಮೂರನೇ ಒಂದು ಭಾಗ ಮಕ್ಕಳು ಮಾತ್ರ ಓದಿಗೆ ಸಾಕಷ್ಟು ಸಮಯ ಮೀಸಲಿಡಲು ಸಾಧ್ಯವಾಯಿತೆಂದು ಹೇಳಿದರು.
- *ಕಲಿಕೆಯ ಮೇಲೆ ಒಟ್ಟಾರೆ ಪರಿಣಾಮ:* ಮೂಲ ಸಾಕ್ಷರತೆಯ ಅತ್ಯಾವಶ್ಯಕ ಅಂಶಗಳನ್ನು ತಮ್ಮ ಮಕ್ಕಳು ಮರೆತ್ತಿದ್ದಾರೆನ್ನುವ ವಿಷಯದಿಂದ ಪೋಷಕರು ಅಸಮಾಧಾನಗೊಂಡಿದ್ದರು. ಸರಾಸರಿ 16 ಶೇಕಡಾ ಪೋಷಕರು, ತಮ್ಮ ಮಕ್ಕಳು ಸರಳ ವಾಕ್ಯಗಳನ್ನು ರಚಿಸುವುದಕ್ಕೆ ಸಹ ಅಸಮರ್ಥರಾಗಿದ್ದಾರೆಂದು ಬೇಸರ ವ್ಯಕ್ತಪಡಿಸಿದರು. ಕುಷ್ಟಗಿಯಲ್ಲಿ, 23 ಶೇಕಡಾ ಪೋಷಕರು ತಮ್ಮ ಮಕ್ಕಳು ಸರಳ ಲೆಕ್ಕಾಚಾರ ಮರೆತ್ತಿದ್ದಾರೆಂದು ದೂರಿದರು. ಇದಕ್ಕೆ ವ್ಯತಿರಿಕ್ತವಾಗಿ, ಕೊಪ್ಪಳ ಮತ್ತು ಯಾದಗಿರಿ ಎರಡೂ ಕಡೆ, ಪೋಷಕರು ತಮ್ಮ ಮಕ್ಕಳ ಕಲಿಯುವ ಸಾಮರ್ಥ್ಯದ ಬಗ್ಗೆ ಧನಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೂ ಮತ್ತು ಟಾಟಾ ಟ್ರಸ್ಟ್ ಅನುಷ್ಠಾನಕ್ಕೆ ತಂದಿರುವ ಕತೆ ಹೇಳುವುದು, ಕಥಾ-ವಾಚನ ಇತ್ಯಾದಿ ಕಲಿಕಾ ಕಾರ್ಯಕ್ರಮಗಳಿಗೂ ಸಂಬಂಧ ಕಲ್ಪಿಸಬಹುದು. ಸರ್ಕಾರೀ ಶಾಲಾ ವಿದ್ಯಾರ್ಥಿಗಳ ಪೋಷಕರಲ್ಲಿ ಅರ್ಧದಷ್ಟು ಪೋಷಕರು ತಮ್ಮ ಮಕ್ಕಳು ಕಲಿಕೆಯಲ್ಲಿ ಆಸಕ್ತಿ ಕಳೆದುಕೊಂಡಿದ್ದಾರೆಂದು ಹೇಳಿದರು ಹಾಗೂ ಯಾದಗಿರಿಯಲ್ಲಿ ಸುಮಾರು 46 ಶೇಕಡಾ ಪೋಷಕರಿಗೆ ತಮ್ಮ ಮಕ್ಕಳ ಕಲಿಕೆಯ ವೇಗ ಕಡಿಮೆಯಾಗಿರುವುದು ಆತಂಕವನ್ನುಂಟುಮಾಡಿತ್ತು. ಆದರೆ, 60 ಶೇಕಡಾಗಿಂತ ಹೆಚ್ಚಿನ ಮಕ್ಕಳು ತಮ್ಮ ಕಲಿಕಾ ಅನುಭವ ಶಾಲೆ ತೆರೆದಿದ್ದಾಗ ಇದ್ದದ್ದಕ್ಕಿಂತ ಹೆಚ್ಚು ಸಮರ್ಪಕವಾಗಿತ್ತೆಂದು ಹೇಳಿದರು. ಮನೆಯಲ್ಲಿ ದೊರಕಲು ಅಸಾಧ್ಯವಾದ ಬೆಂಬಲವು, ಶಿಕ್ಷಕರು, ಸ್ನೇಹಿತರು ಹಾಗೂ ಇತರರ ಮೂಲಕ ದೊರಕುತ್ತಿತ್ತೆಂದು ಹೇಳಿದರು.

## III. ಕೋವಿಡ್ - 19 ಪ್ರತಿವರ್ತನಾ ಕ್ರಮಗಳು: ಮುಖ್ಯ ಭಾಗೀದಾರರ ಮಧ್ಯಸ್ಥಿಕೆ ಕ್ರಮಗಳು

- *ಸರ್ಕಾರದಿಂದ ಡಿಜಿಟಲ್ ಉಪಕ್ರಮಗಳು:* ಕರ್ನಾಟಕದ ಸಾಮಾನ್ಯಜನತೆಯ (mass) ಬಳಿ ಡಿಜಿಟಲ್ ಉಪಕರಣಗಳ ಕೊರತೆ ಇದ್ದಿದ್ದರಿಂದ, ಕರ್ನಾಟಕ ಸರಕಾರ ದೊಡ್ಡ ಮಟ್ಟದ ತಂತ್ರಜ್ಞಾನ-ಬೆಂಬಲಿತ ಶಿಕ್ಷಣಕ್ಕೆ ಸಕ್ರಿಯ ಉತ್ತೇಜನ ನೀಡಲಿಲ್ಲ. ಆದಾಗ್ಯೂ, ನಿಷ್ಠಾ, ಜ್ಞಾನ ಹಂಚಿಕೆಗಾಗಿ ಡಿಜಿಟಲ್ ಮೂಲಸೌಕರ್ಯ (DISKHA), ಮಕ್ಕಳವಾಣಿ ಯೂಟ್ಯೂಬ್ ಚಾನಲ್, ದೂರದರ್ಶನದ ಚಂದನ ಚಾನಲ್ ನಂತಹ ಡಿಜಿಟಲ್ ವೇದಿಕೆಗಳನ್ನು ಬಳಸಿಕೊಂಡು, ಶಿಕ್ಷಕರು ಶೈಕ್ಷಣಿಕ ವಿಷಯವಸ್ತುವನ್ನು ಮಕ್ಕಳಿಗೆ ತಲುಪಿಸಿದರು. ಪಾಠಗಳು, ವಿಷಯವಸ್ತು, ಚಟುವಟಿಕೆಗಳು ಮತ್ತು ಯುಟ್ಯೂಬ್ ಕೊಂಡಿಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳಲು ಶಿಕ್ಷಕರು ವಾಟ್ಸ್ಯಾಪ್ ಬಳಸುತ್ತಿದ್ದರು. ಫಲಿತಗಳನ್ನು ಗಮನಿಸಿದರೆ, 80 ಶೇಕಡಾ ಪೋಷಕರು ತಮ್ಮ ಮಕ್ಕಳು ಟಿವಿಯಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೋಡುತ್ತಿದರೆಂದು ಹೇಳಿದರೆ, 60 ಶೇಕಡಾ ಪೋಷಕರು ಟಿವಿ ಮತ್ತು ಫೋನ್‌ಗಳನ್ನು ಮಕ್ಕಳು ಮನರಂಜನೆಗಾಗಿ ಸಹ ಬಳಸುತ್ತಿದ್ದರು ಎಂದು ಹೇಳಿದರು. ವೆಬ್ ಪೋರ್ಟಲ್‌ಗಳನ್ನು ಪರಿಹಾರ ಕ್ರಮವೆಂದು ನೀಡಲಾಗಿದ್ದರೂ, ಕೇವಲ 16 ಶೇಕಡಾ ಪೋಷಕರು ಇವುಗಳ ಬಳಕೆಯಾಗುತ್ತಿತ್ತೆಂದು ಖಚಿತವಾಗಿ ಹೇಳಿದರು. ಕೇವಲ 20 ಶೇಕಡಾ ಪೋಷಕರು ತಮ್ಮ ಮಕ್ಕಳು ಪಾಠ ಮತ್ತು ಚಟುವಟಿಕೆಗಳಿಗಾಗಿ ವಾಟ್ಸ್ಯಾಪ್ ಬಳಸುತ್ತಿದ್ದರೆಂದು ಹೇಳಿದರು.
- *ಸರ್ಕಾರದ ಇಂಟರ್‌ನೆಟ್ ರಹಿತ ಉಪಕ್ರಮಗಳು:* ಶಾಲೆ ಮುಚ್ಚಿದ್ದ ಸಮಯದಲ್ಲಿ, ಶಿಕ್ಷಣ ನೀಡಲು ಮನೆ-ಭೇಟಿ, ವಿದ್ಯಾಗಮದ ಹೊರಾಂಗಣ ತರಗತಿಗಳು ಮತ್ತು ಸರದಿಯಾಧಾರದ ಮೇಲೆ ತರಗತಿ ಬೋಧನೆಯಂತಹ ಇಂಟರ್‌ನೆಟ್ ರಹಿತ ಕ್ರಮಗಳನ್ನು ಶಿಕ್ಷಕರು ಕೈಗೊಂಡಿದ್ದರು. ಸಮೀಕ್ಷೆಯಲ್ಲಿ ಭಾಗವಹಿಸಿದ ಮೂರನೇ ಒಂದು ಭಾಗದ ಪೋಷಕರು ತಮ್ಮ ಮಕ್ಕಳು ವಿದ್ಯಾಗಮ ತರಗತಿಗಳಿಗೆ ಹಾಜರಿದ್ದರೆಂದು ದೃಢೀಕರಿಸಿದರು, ಶಿಕ್ಷಕರು ಮನೆಗೆ ಭೇಟಿ ನೀಡಿದ್ದರೆಂದು ಕುಷ್ಟಗಿಯಲ್ಲಿ ಐದರಲ್ಲಿ ಒಬ್ಬ ಪೋಷಕರು ಖಚಿತಪಡಿಸಿದರು. ನಂತರ,

ಶಾಲೆಗಳು ಭಾಗಶಃ ತೆರೆಯುವುದಕ್ಕೆ ಅನುಮತಿ ದೊರೆತಾಗ, ಶಿಕ್ಷಕರು ಸರದಿಯ ಆಧಾರದ ಮೇಲೆ ತರಗತಿಗಳನ್ನು ಪ್ರಾರಂಭಿಸಿದರು ಹಾಗೂ 50 ಶೇಕಡಾಗಿಂತ ಹೆಚ್ಚಿನ ಪೋಷಕರು ತಮ್ಮ ಮಕ್ಕಳು ಆ ತರಗತಿಗಳಲ್ಲಿ ಹಾಜರಿದ್ದರೆಂದು ದೃಢೀಕರಿಸಿದರು.

- *ಸರ್ಕಾರೇತರ ಸಂಸ್ಥೆಗಳ ಉಪಕ್ರಮಗಳು:* ಕಲಿಕೆ - ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಟಾಟಾ ಟ್ರಸ್ಟ್ ಸಮುದಾಯ ಕಲಿಕಾ ಕೇಂದ್ರಗಳನ್ನು (CLCs) ಸ್ಥಾಪಿಸಿದೆ ಮತ್ತು ಸ್ಥಳೀಯ ಸ್ವಯಂ ಸೇವಕರ ಸಹಾಯದಿಂದ ಟ್ಯೂಷನ್ ಕೇಂದ್ರಗಳನ್ನು ಸಂಘಟಿಸಿದೆ. ಶಾಲೆಗಳು ತೆರೆದ ನಂತರದ ಘಟ್ಟದಲ್ಲಿ, ಟಾಟಾ ಟ್ರಸ್ಟ್‌ನ ಚೈತನ್ಯದಾಯಕರು (animators) ಸರ್ಕಾರೀ ಶಾಲೆಯ I-III ನೇ ತರಗತಿ ಹಾಗೂ IV-V ನೇ ತರಗತಿಯ ಮಕ್ಕಳಿಗೆ ಸೇತುಬಂಧ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಜೊತೆಗೆ, ಸರ್ಕಾರಿ ಶಾಲೆಯ ಗ್ರಂಥಾಲಯಗಳನ್ನು ಸಬಲಗೊಳಿಸುವ ಉದ್ದೇಶದಿಂದ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಕೊಡಲಾಯಿತು. ಶಾಲಾ ಆಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ (ಎಸ್ ಡಿ ಎಂ ಸಿ) ಗಳ ಪುನರಾಚನೆಗೆ ಟಾಟಾ ಟ್ರಸ್ಟ್ ಬೆಂಬಲ ನೀಡಿತು. ಇಂಗ್ಲಿಷ್, ಗಣಿತ ಮತ್ತು ಕನ್ನಡ ವಿಷಯಗಳಿಗೆ ಕಾರ್ಯಪುಸ್ತಕ ಹಾಗೂ ಚಟುವಟಿಕೆ ಕಾರ್ಡ್‌ಗಳನ್ನು ಸಹ ಅಭಿವೃದ್ಧಿಪಡಿಸಲಾಯಿತು. ಭಾವನಾತ್ಮಕ ಅಸಮತೋಲನ ಮತ್ತು ಮಾನಸಿಕ ಕ್ಷೋಭೆಗಳನ್ನು ಎದುರಿಸುವ ರೀತಿಗಳನ್ನು ಪ್ರಸ್ತುತಪಡಿಸಲು ಕಾರ್ಯಾಗಾರಗಳನ್ನು ನಡೆಸಲಾಯಿತು, ಇತರ ಸರ್ಕಾರೇತರ ಸಂಸ್ಥೆಗಳಿಂದ ಸರ್ಕಾರೀ ಶಾಲೆಗಳಿಗೆ ಪೀಠೋಪಕರಣಗಳ ಸರಬರಾಜು ಮಾಡಲಾಯಿತು ಹಾಗೂ ಹಂಗಾಮಿ ಶಿಕ್ಷಕರ ನೇಮಕಾತಿ ಮಾಡಲಾಯಿತು. ಸಮುದಾಯ ಕೇಂದ್ರಗಳ ರೂಪದಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ನೆರವು ದೊರೆಯಿತು ಮತ್ತು ಶಾಲೆ ಮುಚ್ಚಿದ್ದಾಗ ಅಲ್ಲಿ ಮಕ್ಕಳು ಕಲಿತರು ಎಂದು 50 ಶೇಕಡಾಗಿಂತ ಹೆಚ್ಚಿನ ಪೋಷಕರು ಹೇಳಿದರು.
- *ಶಿಕ್ಷಕರ ಉಪಕ್ರಮಗಳು:* 50 ಶೇಕಡಾಗಿಂತ ಹೆಚ್ಚಿನ ಶಿಕ್ಷಕರು ಶಾಲೆಗಳು ಪುನರಾರಂಭವಾದ ನಂತರ ಮಕ್ಕಳನ್ನು ಶಾಲೆಗೆ ತಿರುಗಿ ಕರೆತಂದು ಅವರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ದೂರವಾಣಿ ಕರೆಗಳನ್ನು ಮಾಡಿದರು ಹಾಗೂ ಮನೆಗಳಿಗೆ ಭೇಟಿ ನೀಡಿದರು. ಮೂರನೇ ಒಂದು ಭಾಗದಷ್ಟು ಶಿಕ್ಷಕರು ವಾಟ್ಸ್ಯಾಪ್ ಕರೆಗಳ ಮೂಲಕ ಮಕ್ಕಳನ್ನು ಸಂಪರ್ಕಿಸಿ, ಅವರು ಶಾಲೆಗೆ ತಿರುಗಿ ಬರುವಂತೆ ಮಾಡಿದರು.
- *ಇತರ ಭಾಗೀದಾರರ ಉಪಕ್ರಮಗಳು:* ಶಾಲೆ ಮುಚ್ಚಿದ ಅವಧಿಯಲ್ಲಿ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ಅತ್ಯಂತ ಬಡತನದಲ್ಲಿದ್ದ ಕುಟುಂಬಗಳಿಗೆ ಆನ್‌ಲೈನ್ ಶಿಕ್ಷಣವನ್ನು ಅನುಕೂಲಿಸಲು ಸ್ಮಾರ್ಟ್‌ಫೋನ್ ಮತ್ತು ನವೀಕರಿಸಿದ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಿದರು. ಅವರು, ಪಂಚಾಯತಿ ಗ್ರಂಥಾಲಯಗಳನ್ನು ಸ್ಥಾಪಿಸಿ 2-3 ಗಂಟೆಗಳು ಮಕ್ಕಳು ಅಲ್ಲಿಗೆ ಬರಲೆಂದು ಆಹ್ವಾನ ನೀಡಿದರು. ಎರಡು ವರ್ಷ ಮುಚ್ಚಿ ಶಿಥಿಲ ಸ್ಥಿತಿಯಲ್ಲಿದ್ದ ಶಾಲೆಗಳಿಗೆ ನೀರು ಸರಬರಾಜು, ಸ್ಮಾರ್ಟ್ ಬೋರ್ಡ್‌ನ ಅಳವಡಿಕೆ, ಶಾಲಾ ಆವರಣದಲ್ಲಿ ಮರದ ಸಸಿಗಳ ನೆಡುವಿಕೆ, ಮಕ್ಕಳಿಗೆ ಆಕರ್ಷಣೀಯವಾಗಿರುವಂತೆ ಗೋಡೆಗಳ ಮೇಲೆ ಚಿತ್ತಾರ, ಕಾಂಪೌಡ್‌ನ ರಿಪೇರಿ ಇತ್ಯಾದಿ ಕೆಲಸಗಳಿಗೆ ಸಹ ಪ್ರತಿನಿಧಿಗಳು ಕೊಡುಗೆ ನೀಡಿದರು. ಜೊತೆಗೆ, ಶಾಲಾ ಅಭಿವೃದ್ಧಿ ಚಟುವಟಿಕೆಗಳಿಗೆ ಸಮುದಾಯದಿಂದ ದೇಣಿಗೆ ಹಣವನ್ನು ಸಹ ಸಂಗ್ರಹಿಸಿದರು. ದೀರ್ಘಕಾಲ ಶಾಲೆ ಮುಚ್ಚಿದ್ದರಿಂದ, ಜಾಗತಿಕ ಪಿಡುಗಿನ ನಂತರ ಶಾಲೆಗೆ ಮರಳಿ ಬರಲು ಹಿಂಜರಿಯುತ್ತಿದ್ದ ಮಕ್ಕಳು ಪುನಃ ಶಾಲೆಗೆ ಬರುವಂತೆ ಮಾಡುವುದರಲ್ಲಿ ಎಸ್‌ಡಿಎಂಸಿಗಳು ಮಹತ್ವದ ಪಾತ್ರವಹಿಸಿದವು. ಜಾಗತಿಕ ಪಿಡುಗಿನ ನಂತರದ ಘಟ್ಟದಲ್ಲಿ ಎಸ್ ಡಿಎಂಸಿಗಳು ಶಾಲಾ ಅಭಿವೃದ್ಧಿಗಾಗಿ ಒಂದು ಕುಟುಂಬದಿಂದ ರೂ. 1000 ಸಂಗ್ರಹಿಸಿದವು..
- *ಶಾಲೆ ತೆರೆದ ನಂತರದ ಕಾಲದಲ್ಲಿ ಅಂಗನವಾಡಿ ಕೇಂದ್ರಗಳು ಮತ್ತು ಶಾಲೆಗಳು ಪ್ರದರ್ಶಿಸಿದ ಸಿದ್ಧತೆ:* ಶಾಲೆ ಮರು-ಪ್ರಾರಂಭವಾದ ಘಟ್ಟದಲ್ಲಿ, ಮಕ್ಕಳನ್ನು ಸ್ವಾಗತಿಸಲು ಮತ್ತು ಅವರ ಶಿಕ್ಷಣ ಮತ್ತು ಹಕ್ಕಿನ ಸೌಲಭ್ಯಗಳನ್ನು ಪಡೆದುಕೊಳ್ಳಲು ಅಂಗನವಾಡಿ ಕೇಂದ್ರಗಳು ಮತ್ತು ಶಾಲೆಗಳು ಅನೇಕ ಸಿದ್ಧತಾ ಮತ್ತು ಸುರಕ್ಷಣಾ ಕ್ರಮಗಳನ್ನು ತೆಗೆದುಕೊಂಡವು. ಮಕ್ಕಳು ಶಾಲೆಗೆ ತಿರುಗಿ ಬರುವಂತೆ ಮಾಡಲು, ಅವರಿಗೆ ಬಿಸಿ ಊಟ ತಯಾರಿಸುವುದರ ಕಡೆ ಗಮನಕೊಟ್ಟೆವು ಹಾಗೂ ಅದರ ಜೊತೆ ಮಕ್ಕಳ ಹಾಗೂ ಅಂಗನವಾಡಿ ಕೇಂದ್ರದ ಶುಚಿತ್ವವನ್ನು ಕಾಪಾಡಿದೆವೆಂದು ಸರಾಸರಿ 60 ಶೇಕಡಾ ಅಂಗನವಾಡಿ ಕಾರ್ಯಕರ್ತರು ತಿಳಿಸಿದರು.
- *ಶಾಲೆಗಳಲ್ಲಿ ಹಕ್ಕಿನ ಸೌಲಭ್ಯಗಳು:* ಸಮೀಕ್ಷೆಯಲ್ಲಿ ಭಾಗವಹಿಸಿದ ಶಾಲೆಗಳು ಕೋವಿಡ್-19ಕ್ಕೆ ಮುಂಚೆ, ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿ ಊಟ ಇತ್ಯಾದಿ ಸೌಲಭ್ಯಗಳನ್ನು ನೀಡುತ್ತಿದ್ದವು. ಆದರೆ ಶಾಲೆಗಳು ಮುಚ್ಚಿದ ಕೂಡಲೇ ಬಿಸಿ ಊಟದ ಹೊರತಾಗಿ ಎಲ್ಲ ಸೌಲಭ್ಯಗಳನ್ನು ಏಕಾಏಕಿ ನಿಲ್ಲಿಸಲಾಯಿತು. ಶಾಲೆ ಮುಚ್ಚಿದ ಅವಧಿಯಲ್ಲಿ ಮಧ್ಯಾಹ್ನದ ಊಟವನ್ನು ಒಣ ಪಡಿತರದ ರೂಪದಲ್ಲಿ

ನೀಡಲಾಗುತ್ತಿತ್ತು ಹಾಗೂ ಶಾಲೆಗಳು ತೆರೆದ ನಂತರ ವಿದ್ಯಾರ್ಥಿಗಳಿಗೆ ಪುನಃ ಬಿಸಿ ಊಟವನ್ನು ನೀಡಲಾಯಿತು. ಯಾದಗಿರಿ ಮತ್ತು ಕೊಪ್ಪಳದಲ್ಲಿ ಕೋವಿಡ್‌ಗೆ ಮೊದಲು ಸ್ಯಾನಿಟರಿ ಪ್ಯಾಡ್‌ಗಳನ್ನು ಶಾಲೆಗಳಲ್ಲಿ ವಿತರಿಸಲಾಗುತ್ತಿತ್ತು. ಶಾಲೆಗಳು ತರಗತಿಗಳನ್ನು ಪುನರಾರಂಭಿಸಿದ ನಂತರ ಇದು ಪ್ರಾರಂಭವಾಗಬೇಕಿದೆ.

- *ಶಾಲಾ ಶಿಕ್ಷಕರ ಸಿದ್ಧತೆ:* ಶಾಲೆ ಪುನರಾರಂಭವಾದ ಅವಧಿಯಲ್ಲಿ ಮಕ್ಕಳನ್ನು ಸ್ವಾಗತಿಸಲು ಸಿದ್ಧತಾ ಮತ್ತು ಸುರಕ್ಷಣಾ ಕ್ರಮಗಳ ಅನುಸರಣೆ ಸರಿಯಾಗಿ ಆಗುವುದನ್ನು ಶಿಕ್ಷಕರು ಖಚಿತಪಡಿಸಿಕೊಂಡರು, ಮಕ್ಕಳ ಸುರಕ್ಷತೆಗಾಗಿ ಶಾಲೆಯ ನಿರ್ಮಲೀಕರಣ ಕಾರ್ಯಕ್ರಮ, ಮಾಸ್ಕ್ ವಿತರಣೆ ಇತ್ಯಾದಿ ಕ್ರಿಯೆಗಳಲ್ಲಿ ತೊಡಗಿಕೊಂಡಿದ್ದೆವೆಂದು ಸುಮಾರು ಎಲ್ಲ ಶಿಕ್ಷಕರೂ ಹೇಳಿದರು. ಪ್ರಾರಂಭದ ದಿನಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಕ್ಕಳು ಸರದಿಯ ಆಧಾರದ ಮೇಲೆ ಶಾಲೆಗೆ ಬರುವಂತೆ ಯೋಜಿಸಲಾಗಿತ್ತು.

## ಇ. ಶಿಫಾರಸ್ಸುಗಳು

### I. ಶಾಸಕರಿಗೆ

- *ಅಂಚಿನ ಸಮುದಾಯಗಳಿಗೆ ಸಾಮಾಜಿಕ ಸಂರಕ್ಷಣೆ:* ಅಂಚಿನ ಸಮುದಾಯಗಳ ಸಾಮಾಜಿಕ ನೆರವಿನ ಅಗತ್ಯಗಳಿಗೆ ಸಂಬಂಧಪಟ್ಟ ವಿಷಯಗಳು ಮತ್ತು ನರೇಗಾ (MGNREGA) ಮೂಲಕ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸಿ ಜನರನ್ನು ಬಡತನದಿಂದ ಮೇಲೆತ್ತುವ ಮತ್ತು ಸಾಲ ಮುಕ್ತರನ್ನಾಗಿಸುವ ವಿಷಯಗಳ ಬಗ್ಗೆ ಶಾಸಕರಿಗೆ ಅರಿವು ಮೂಡಿಸಬೇಕಿದೆ.
- *ಮಕ್ಕಳ ಸಂರಕ್ಷಣೆ:* ಸರ್ಕಾರವು, ಅಗತ್ಯವಿರುವೆಡೆಯಲ್ಲಿ ಸೌಲಭ್ಯ ವಿತರಣೆಯ ಮಾನದಂಡಗಳನ್ನು ಸಡಿಲಿಸಬೇಕು, ಹೆಣ್ಣು ಮಕ್ಕಳಿಗೆ ವಸತಿ ಸೌಕರ್ಯಗಳನ್ನು ಹೆಚ್ಚಿಸಬೇಕು, ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಬಾಲ ಕಾರ್ಮಿಕತೆ, ಸಾಗಾಣಿಕೆ, ಬಾಲ್ಯ ವಿವಾಹ ಇತ್ಯಾದಿಗಳ ಪರ ಶೂನ್ಯ ಸಹಿಷ್ಣುತೆಯನ್ನು (zero- tolerance) ಪ್ರದರ್ಶಿಸಬೇಕು.
- *ಮಕ್ಕಳಿಗೆ ಸಂಭವಿಸಬಹುದಾದ ಹಾನಿಗಳ ಕುರಿತಾಗಿ ವಾಸ್ತವ-ಸಮಯದ ದತ್ತಾಂಶ ಸಂಗ್ರಹಣೆಯಲ್ಲಿ ಹೂಡಿಕೆ:* ಜಾಗತಿಕ ಪಿಡುಗಿನ ನಂತರದ ಕಾಲದಲ್ಲಿ ಶಾಲೆಯಿಂದ ಹೊರಬೀಳುವಿಕೆ, ಕಿರುಕುಳ, ಸಾಗಾಣಿಕೆ, ಬಾಲ್ಯ ವಿವಾಹ, ಬಾಲ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಮಕ್ಕಳ ಜೀವನದಲ್ಲಿ ಸಂಭವಿಸಬಹುದಾದ ಈ ಹಾನಿಗಳನ್ನು ತಡೆಗಟ್ಟಲು, ಈ ಸವಾಲುಗಳ ಕುರಿತಾದ ನಿಖರ ಮಾಹಿತಿ ಸಂಗ್ರಹಿಸುವುದರಲ್ಲಿ ಸರ್ಕಾರವು ತೊಡಗಬೇಕು.
- *ಮಕ್ಕಳಿಗಾಗಿ ತೆಗೆದುಕೊಳ್ಳುವ ಮಧ್ಯಸ್ಥಿಕೆ ಕ್ರಮಗಳು ಹಕ್ಕು-ಆಧಾರಿತವಾಗಿರಬೇಕು, ಒಳಗೊಳ್ಳಬೇಕು ಮತ್ತು ಸುಸ್ಥಿರವಾಗಿರಬೇಕು:* ತುರ್ತು ಪರಿಸ್ಥಿತಿಗಳಲ್ಲಿಯೂ ಸಹ ಮಕ್ಕಳ ಶಿಕ್ಷಣ ಹಕ್ಕಿಗೆ ಧಕ್ಕೆಯಾಗದಿರುವುದು ಅಥವಾ ಹಕ್ಕು ಉಲ್ಲಂಘನೆಯಾಗದಿರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಶಿಕ್ಷಣ ಹಕ್ಕನ್ನು ಸಂರಕ್ಷಿಸುವುದರ ಪ್ರಾಥಮಿಕ ಜವಾಬ್ದಾರಿ ಸರ್ಕಾರದ್ದೇ ಆಗಿರುತ್ತದೆ.
- *ಶಿಕ್ಷಣಕ್ಕಾಗಿ ಹಣಕಾಸು ಅನುದಾನ:* ಶಿಕ್ಷಣ ಹಕ್ಕಿನ ಒದಗಣೆಗಳು ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸಲು ಮತ್ತು ಶಿಕ್ಷಣ ಒದಗಿಸಲು ಆವಶ್ಯಕವಾದ ಹಣಕಾಸಿನ ಪರಿಮಾಣದಲ್ಲಿರುವ ಕೊರತೆಯ ಕುರಿತು ಶಾಸಕರಿಗೆ ಅರಿವು ಮೂಡಿಸುವುದು.
- *ಸಾರ್ವಜನಿಕ ಶಿಕ್ಷಣವನ್ನು ಸಬಲಗೊಳಿಸುವುದು:* ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಬಲಗೊಳಿಸಲು ಆವಶ್ಯಕವಾಗಿರುವ ಶಿಕ್ಷಕರ ನೇಮಕಾತಿ, ಶಿಕ್ಷಕರ ತರಬೇತಿ ಮತ್ತು ಮೂಲಭೂತ ಸೌಲಭ್ಯಗಳ ಅಂಶಗಳನ್ನು ಒತ್ತಿಹೇಳಿ, ಸರ್ಕಾರವು ಈ ಅಂಶಗಳಿಗೆ ಆದ್ಯತೆ ಕೊಡುವುದನ್ನು ಖಾತರಿ ಪಡಿಸಿಕೊಳ್ಳುವುದು.
- *ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು (ಮಾಸಂತಂ / ICT) ಮುಖಾಮುಖಿ ಶಿಕ್ಷಣವನ್ನು ಸ್ಥಳಪಲ್ಲಟಗೊಳಿಸಬಲ್ಲದು ಎನ್ನುವುದರ ಬದಲು ಮಾಸಂತಂವನ್ನು ಒಂದು ಉಪಕರಣವೆಂದು ಗುರುತಿಸುವುದು:* ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಭೌತಿಕ ತರಗತಿ ಶಿಕ್ಷಣವನ್ನು ಸ್ಥಳಪಲ್ಲಟಗೊಳಿಸುವುದು ಸಾಧ್ಯವೇ ಇಲ್ಲ ಎನ್ನುವ ಅಂಶವನ್ನು ಸಾಕ್ಷ್ಯಾಧಾರಗಳೊಂದಿಗೆ ಒತ್ತಿಹೇಳುವುದು ಬಹಳ ಮುಖ್ಯ. ಆದರೆ, ಕೆಲವು ಅಂತರಗಳಿರುವಲ್ಲಿ ಸೇತುಬಂಧದ ಉಪಕರಣವಾಗಿ ಇದನ್ನು ಬಳಸಬಹುದು.

- *ಕಲಿಕೆಗೆ ವಿಸ್ತಾರ ಪರಿಭಾಷೆ:* ಜಾಗತಿಕ ಪಿಡುಗು ಮಕ್ಕಳ ಕಲಿಕಾ ಮಟ್ಟಗಳಲ್ಲಿರುವ ಅಂತರಗಳನ್ನು ತೋರಿಸಿದೆ. ಕಲಿಕೆಯ ಪರಿಕಲ್ಪನೆಯು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಂಬಂಧಿಸಿರಬೇಕು. ಇದರ ಸಲುವಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) ಮತ್ತು ಮಕ್ಕಳ ಹಕ್ಕು ಕಾಯಿದೆಯ ಮೂಲಕ ಕೆಲವು ಪ್ರಯತ್ನಗಳನ್ನು ಮಾಡಲಾಗಿದೆ ಆದರೆ ಸಂಪೂರ್ಣ ಕ್ರಮಗಳನ್ನು ತೆಗೆದುಕೊಂಡಿಲ್ಲ. ಜಾಗತಿಕ ಪಿಡುಗಿನ ಸಂದರ್ಭದಲ್ಲಿ ಗೋಚರವಾದ ಸಮಸ್ಯೆಗಳ ಬೆಳಕಿನಲ್ಲಿ ರಾಪಚೌ ಅನ್ನು ಪುನರ್ ಪರಿಶೀಲಿಸಬೇಕು, ಕಲಿಕೆಯ ದೃಷ್ಟಿಕೋನವನ್ನು ವಿಸ್ತರಿಸಬೇಕು.

### II. ಹಣಕಾಸು ನೆರವು ಒದಗಿಸುವ ಸಂಸ್ಥೆಗಳಿಗೆ

- *ಮಕ್ಕಳ ಸಂಭಾವ್ಯ ಹಾನಿಗಳ ಅಧ್ಯಯನಗಳಿಗಾಗಿ ಆರ್ಥಿಕ ನೆರವು:*: ಜಾಗತಿಕ ಪಿಡುಗಿನ ನಂತರದ ಕಾಲದಲ್ಲಿ ಬಾಲ ಕಾರ್ಮಿಕತೆ, ಸಾಗಾಣಿಕೆ, ಮಕ್ಕಳಿಗೆ ಕಿರುಕುಳ , ಬಾಲ್ಯ ವಿವಾಹ, ಇತ್ಯಾದಿ ಸವಾಲುಗಳು ಕುರಿತಂತೆ ದೊರೆಯುವ ವಾಸ್ತವ-ಸಮಯ ದತ್ತಾಂಶದಲ್ಲಿ ಕೊರತೆಯಿದೆ. ಮಕ್ಕಳಿಗೆ ಸಂಭವಿಸಬಹುದಾದ ಹಾನಿಗಳ ಸವಾಲುಗಳನ್ನು ಎದುರಿಸಲು ಆರ್ಥಿಕ ಬೆಂಬಲವನ್ನು ನೀಡಲೇಬೇಕು.

- *ಕೋವಿಡ್-19ರ ಪರಿಣಾಮ ಕುರಿತಾದ ಸಂಶೋಧನೆ ಮತ್ತು ಮಧ್ಯಸ್ಥಿಕೆ ಕ್ರಮಗಳಿಗೆ ಆರ್ಥಿಕ ಬೆಂಬಲ:* ಮಕ್ಕಳ ಶಿಕ್ಷಣದ ಮೇಲೆ ಕೋವಿಡ್-19 ರಿಂದ ಉಂಟಾಗುವ ಸಂಭಾವ್ಯ ಹಾನಿಗಳನ್ನು ಪರಿಶೀಲಿಸಿ ಪರಿಹಾರ ಕಂಡು ಹಿಡಿಯುವ ಸಂಶೋಧನೆ ಮತ್ತು ಮಧ್ಯಸ್ಥಿಕೆ ಕ್ರಮಗಳಿಗೆ ಸಹ ದಾನಿ-ಸಂಸ್ಥೆಗಳು ಆರ್ಥಿಕ ನೆರವನ್ನು ನೀಡಬಹುದು.

### III. ಸ್ಥಳೀಯ ಸಮುದಾಯಕ್ಕೆ

- *ಶಾಲೆಗಳ ಸಾಮುದಾಯಿಕ ಸ್ವಾಮ್ಯವನ್ನು ಪ್ರೋತ್ಸಾಹಿಸುವುದು:* ರಾಜಸ್ಥಾನ ಮತ್ತು ಕರ್ನಾಟಕದಲ್ಲಿ ಪಂಚಾಯಿತಿಗಳು, ಶಾಲಾ ನಿರ್ವಹಣಾ ಸಮಿತಿಗಳು ಮತ್ತು ಸಮುದಾಯಗಳು ಕ್ರಿಯಾಶೀಲ ಪಾತ್ರ ವಹಿಸಿವೆ. ಇನ್ನುಳಿದ ಕಡೆ ಈ ಸಂಸ್ಥೆಗಳ ವರ್ತನೆ ವಿಷಾದಕರವಾಗಿದೆ. ಈ ಎರಡು ರಾಜ್ಯಗಳ ಅನುಕರಣೀಯ ಮಾದರಿಗಳನ್ನು ಮಿಕ್ಕ ರಾಜ್ಯಗಳು ಆಚರಣೆಗೆ ತರಬೇಕು.
- *ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಶಾಲಾ ನಿರ್ವಹಣಾ ಸಮಿತಿಗಳ ಸಕ್ರಿಯ ತೊಡಗಿಸಿಕೊಳ್ಳುವಿಕೆ:* ಶಾಲಾ ಸಬಲೀಕರಣ ಚಟುವಟಿಕೆಗಳಲ್ಲಿ ಪಂಚಾಯಿತಿಗಳು ಮತ್ತು ಶಾಲಾ ನಿರ್ವಹಣಾ ಸಮಿತಿಗಳು ಸಕ್ರಿಯವಾಗಿ ತೊಡಗಿಕೊಳ್ಳಬೇಕು ಮತ್ತು ಶಾಲಾ ಅಭಿವೃದ್ಧಿಗೆ ಅವರಿತ್ತ ಧನಾತ್ಮಕ ಕೊಡುಗೆಗಳು ಪುರಸ್ಕೃತಗೊಳ್ಳಬೇಕು.

## • ಟಾಟಾ ಟ್ರಸ್ಟ್, ಕ್ಷೇತ್ರ ಸಿಬ್ಬಂದಿ ಮತ್ತು ಇತರ ಸರ್ಕಾರೇತರ ಸಂಸ್ಥೆಗಳಿಗಾಗಿ

ಶಾಸಕರಿಗೆ ಒತ್ತಿಹೇಳಿರುವ ವಿವಿಧ ಶಿಫಾರಸ್ಸುಗಳಲ್ಲಿನ ಚಟುವಟಿಕೆಗಳ ಅನುಷ್ಠಾನ, ಉತ್ತೇಜನ/ಪ್ರಚಾರ, ಸಾಮರ್ಥ್ಯ ವರ್ಧನೆ ಮುಂತಾದವುಗಳಲ್ಲಿ ಟಾಟಾ ಟ್ರಸ್ಟ್, ಕ್ಷೇತ್ರ ಸಿಬ್ಬಂದಿ ಮತ್ತಿತ್ತರ ಸರ್ಕಾರೇತರ ಸಂಸ್ಥೆಗಳು ತೊಡಗಿಕೊಳ್ಳಬಹುದು ಹಾಗೂ ಸಮುದಾಯ ಸಂಪನ್ಮೂಲಗಳನ್ನು ದೊರಕಿಸುವ ಕ್ರಮಗಳನ್ನು ಕೈಗೊಳ್ಳಬಹುದು. ಈ ನಿಟ್ಟಿನಲ್ಲಿ ಅವರ ಚಟುವಟಿಕೆಗಳನ್ನು ರೂಪಿಸುವ ನಿರ್ದಿಷ್ಟ ಶಿಫಾರಸ್ಸುಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

| ಪಟ್ಟಿ 1: ಟಾಟಾ ಟ್ರಸ್ಟ್ ಮತ್ತಿತರ ಸರ್ಕಾರೇತರ ಸಂಸ್ಥೆಗಳಿಗೆ ನಿರ್ದಿಷ್ಟ ಶಿಫಾರಸ್ಸುಗಳು | | | | |
|---|---|---|---|---|
| | **ಅನುಷ್ಠಾನ (ಸೇವಾ ಒದಗಣೆ / ಅರಿವು ಮೂಡಿಸುವುದು** | **ಪ್ರಚಾರ** | **ಸಾಮರ್ಥ್ಯ ಅಭಿವೃದ್ಧಿ** | **ಶೈಕ್ಷಣಿಕ ಮಧ್ಯಸ್ಥಿಕೆ ಕ್ರಮಗಳ ಜಾಡನ್ನು ಗಮನಿಸುವವರಾಗಿ** |
| ಅಂಚಿನಲ್ಲಿರುವ ಗುಂಪುಗಳಿಗೆ ಹೆಚ್ಚಿನ ಸಾಮಾಜಿಕ ಸಹಾಯ ಒದಗಣೆ | • ತುರ್ತು ಪರಿಸ್ಥಿತಿ ಚೀಲ, ಪೂರಕ ಪೌಷ್ಟಿಕಾಂಶಗಳು, ಒಣ ಪಡಿತರ ಇತ್ಯಾದಿಗಳನ್ನು ತುರ್ತು ಪರಿಸ್ಥಿತಿಯ ಸಮಯದಲ್ಲಿ ಒದಗಿಸುವುದು | • ಸಮಾಜ ಸಂರಕ್ಷಣೆ ಕ್ರಮಗಳ ಅಗತ್ಯಗಳ ಪ್ರಚಾರ | • ಆಶಾ, ಅಂಗನವಾಡಿ ಕಾರ್ಯಕರ್ತರು, ಸ್ವ-ಸಹಾಯ ಗುಂಪುಗಳು, ಸಮುದಾಯ ಮತ್ತು ಇತರ ಗುಂಪುಗಳಿಗೆ ತತ್‌ಕ್ಷಣ ಪ್ರತಿವರ್ತಿಸುವ ರೀತಿಗಳ ಕುರಿತಾದ ಸಾಮರ್ಥ್ಯ ಅಭಿವೃದ್ಧಿ | • ಹಾನಿಯುಂಟಾಗಬಹುದಾದ ಜನರ ಸಾಮಾಜಿಕ ಸಂರಕ್ಷಣಾ ಸಮೀಕ್ಷೆ |
| ಮಕ್ಕಳಿಗೆ ಸಂಭವಿಸಬಹುದಾದ ಹಾನಿಗಳ ಕುರಿತಾಗಿ ವಾಸ್ತವ-ಸಮಯ ದತ್ತಾಂಶ ಸಂಗ್ರಹಣೆ ಮತ್ತು ಸಮಸ್ಯಾ ಪರಿಹಾರ | • ಹಳ್ಳಿ/ಬ್ಲಾಕ್/ಜಿಲ್ಲೆ/ರಾಜ್ಯ ಮಟ್ಟದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಬಾಲ್ಯ ವಿವಾಹ, ಮಕ್ಕಳ ಸಾಗಾಣಿಕೆ, ಬಾಲ ಕಾರ್ಮಿಕತೆ, ಮಕ್ಕಳ ಶೋಷಣೆ ಇತ್ಯಾದಿ ಕುರಿತ ದತ್ತಾಂಶ ಸಂಗ್ರಹಣೆ<br>• ಹೆಣ್ಣು ಮಕ್ಕಳ ಶಿಕ್ಷಣ ಮತ್ತು ವಿಶೇಷ ಅಗತ್ಯಗಳುಳ್ಳ ವಿದ್ಯಾರ್ಥಿಗಳ ಕಲಿಕೆಯ ಸಲುವಾಗಿ ಮಧ್ಯಸ್ಥಿಕೆ ಕ್ರಮಗಳು ಹಾಗೂ ಅರಿವು ಮೂಡಿಸುವಿಕೆ | • ಮಕ್ಕಳಿಗೆ ಸಂಭವಿಸಬಹುದಾದ ಹಾನಿಗಳ ಕುರಿತಾಗಿ ನವೀಕರಿಸಿದ ದತ್ತಾಂಶವಿಲ್ಲದಿರುವುದರ ಕುರಿತಾಗಿ ಪ್ರಚಾರ<br>• ಪೋಷಕರು ಸಾವನ್ನಪ್ಪಿದ ಸಂದರ್ಭದಲ್ಲಿ ಕೋವಿಡ್-19 ಪರಿಹಾರ ದೊರಕದಿರುವ ಅರ್ಹ ಮಕ್ಕಳ ಹೊರಗಿಡುವಿಕೆ ಕುರಿತಾದ ಪ್ರಚಾರ | • ದುಷ್ಪರಿಣಾಮವಾಗಿರುವ ಮಕ್ಕಳಿಗೆ ಆಪ್ತ ಸಲಹೆ ಅವಧಿಗಳು, ಕ್ಯಾಂಪ್‌ಗಳು ಹಾಗೂ ಅವರನ್ನು ಶಾಲಾ ಮುಖ್ಯವಾಹಿನಿಗೆ ಕರೆತರುವುದು<br>• ಮಕ್ಕಳು ಶಿಕ್ಷಣ ಮತ್ತು ಉದ್ಯೋಗವೆರಡನ್ನೂ ಮಾಡಲು ಅನುವು ಮಾಡಿಕೊಡಲು ಉದ್ಯೋಗ ಕೌಶಲ ತರಬೇತಿ ಮತ್ತು ಪರಿಹಾರ ಬೋಧನೆ. | • ಬಾಲ್ಯ ವಿವಾಹ, ಸಾಗಾಣಿಕೆ, ಬಾಲ ಕಾರ್ಮಿಕತೆ ಮತ್ತು ಶೋಷಣೆಗಳ ಸಂದರ್ಭದಲ್ಲಿ ಅವನ್ನು ಜಗಜ್ಜಾಹೀರು ಮಾಡುವುದು<br>• ವಸತಿ ಶಾಲೆ, ಮನೆ, ಕ್ಯಾಂಪ್, ಶಾಲೆಗಳಲ್ಲಿ ಮಕ್ಕಳೊಡನೆ ದುರ್ವರ್ತನೆ ಕಂಡುಬಂದ ಸಂದರ್ಭದಲ್ಲಿ ಅವನ್ನು ಜಗಜ್ಜಾಹೀರುಗೊಳಿಸುವುದು<br>• ಮಕ್ಕಳ ಸಂಭವನೀಯ ಹಾನಿಗಳನ್ನು ಗಮನಿಸಿ ಅದಾಗುವುದನ್ನು ತಡೆಗಟ್ಟಲು ಸ್ವಯಂ ಸೇವಕರು ಮತ್ತು ಸಮುದಾಯದ ಕ್ರಿಯಾಶೀಲ ವ್ಯಕ್ತಿಗಳನ್ನು ತೊಡಗಿಸುವುದು. |
| ಶಿಕ್ಷಕ ನೇಮಕಾತಿ, ತರಬೇತಿ ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು<br>ಸಬಲಗೊಳಿಸುವುದು | • ಶಿಕ್ಷಕ ಶಿಕ್ಷಣ ಸಂಸ್ಥೆಗಳ ತರಬೇತಿ ಮಾಡ್ಯೂಲ್‌ಗಳ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವುದು<br>• ಶಾಲೆ ತೆರೆದ ನಂತರ ಶಾಲಾ ಅಗತ್ಯಗಳನ್ನು ಪೂರೈಸಲು ಸಾರ್ವಜನಿಕ ಶಾಲೆಗಳಿಗೆ ಸಹಾಯ ಹಸ್ತ ನೀಡುವುದು<br>• ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮಧ್ಯಸ್ಥಿಕೆ ಕ್ರಮಗಳಿಗೆ ಸಂಪನ್ಮೂಲಗಳನ್ನು ಸಜ್ಜುಗೊಳಿಸುವುದು | • ಶಿಕ್ಷಕರ ನೇಮಕಾತಿ ಮತ್ತು ಶಿಕ್ಷಕರ ಗುಣಮಟ್ಟ ಕುರಿತು ಪ್ರಚಾರ | • ಶಿಕ್ಷಕರ ತರಬೇತಿ<br>• ಶಿಕ್ಷಣ ಶಾಸ್ತ್ರದಲ್ಲಿ ಮಕ್ಕಳ ಜೀವನಾನುಭಗಳು ಒಳಗೊಂಡಿರುವಂತಹ ಶಿಕ್ಷಕ ತರಬೇತಿ<br>• ಕೋವಿಡ್-19 ಜಾಗತಿಕ ಪಿಡುಗಿನ ನಂತರ ಮಕ್ಕಳನ್ನು ನಡೆಸಿಕೊಳ್ಳಬೇಕಾದ ರೀತಿ, ಮಕ್ಕಳಿಗೆ ಮನಶಾಸ್ತ್ರೀಯ ಬೆಂಬಲ, ಕಲಿಕಾ ವರ್ಧನೆ, ಮಕ್ಕಳ ಅಭಿವೃದ್ಧಿಗಾಗಿ ಶಿಕ್ಷಕರ | • ಶಿಕ್ಷಕರ ಕೊರತೆ ಕುರಿತು ಮೌಲ್ಯಾಂಕನ ಅಧ್ಯಯನ<br>• ಕೋವಿಡ್- 19 ಸವಾಲುಗಳನ್ನು ಎದುರಿಸಲು ಹಣಕಾಸಿನ ಅಭಾವವಿರುವುದರ ಕುರಿತು ನೀತಿ ಸಂಕ್ಷಿಪ್ತ ವಿವರಣೆ |

| | | | | |
|---|---|---|---|---|
| | | | ತರಬೇತಿ<br>• ಭವಿಷ್ಯದಲ್ಲಿ ಎದುರಾಗಬಹುದಾದ ತುರ್ತು ಸ್ಥಿತಿ/ಶಾಲಾ ಮುಚ್ಚುವಿಕೆಯನ್ನು ನಿಭಾಯಿಸಲು ಶಿಕ್ಷಕರ ಸಿದ್ಧತೆಗೆ ತರಬೇತಿ | |
| ಮಾಸಂತಂ (ICT) ಮುಖಾಮುಖಿ ಶಿಕ್ಷಣದ ಸ್ಥಳಪಲ್ಲಟ ಮಾಡುತ್ತದೆ ಎಂದಲ್ಲದೇ, ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭವನ್ನು ಎದುರಿಸಲು ಒಂದು ಉಪಕರಣವಾಗಬಹುದು ಎನ್ನುವುದನ್ನು ಗುರುತಿಸಬೇಕು, | • ಡಿಜಿಟಲ್ ಸುಲಭಲಭ್ಯತೆ ಇಲ್ಲದಿರುವ ಮಕ್ಕಳಿಗೆ ಮಾಸಂತಂ (ICT) ಅಂತರಕ್ಕೆ ಸೇತುವೆಗಳನ್ನು ನಿರ್ಮಿಸುವುದು<br>• ಮುಖಾಮುಖಿ ಕಲಿಕೆಗೆ ಸಮುದಾಯ ಕಲಿಕಾ ಚಟುವಟಿಕೆಗಳ ಮುಂದುವರಿಕೆ | • ಡಿಜಿಟಲ್ ಶಿಕ್ಷಣದ ಅನುಕೂಲಗಳು ಮತ್ತು ಅನಾನುಕೂಲಗಳ ಕುರಿತು ನೀತಿ ಸಂಕ್ಷಿಪ್ತ ವಿವರಣೆಗಳನ್ನು ತಯಾರಿಸಿ ಅದರ ಮೂಲಕ ಪ್ರಚಾರ | • ಶಿಕ್ಷಣಕ್ಕಾಗಿ ಮಾಸಂತಂ (ICT) ಅನ್ನು ಉಪಕರಣವನ್ನಾಗಿ ಬಳಸಲು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೊಳಿಸುವುದು | • ಮಾಸಂತಂ (ICT) ಯ ವಿವೇಕಯುತ ಬಳಕೆಗಾಗಿ ಶೈಕ್ಷಣಿಕ ಭಾಗೀದಾರರೊಂದಿಗೆ ಚರ್ಚೆ ಮತ್ತು ಸಂವಾದ |
| ಮಕ್ಕಳ ಶಿಕ್ಷಣ ಹಕ್ಕುಗಳ ಸಂರಕ್ಷಣೆ ಮತ್ತು ಒಳಗೊಳ್ಳುವ ಕ್ರಮಗಳು ಅಂಗೀಕೃತವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು | **ಪ್ರಾರಂಭಿಕ ಬಾಲ್ಯಾವಸ್ಥೆ ಶಿಕ್ಷಣ**<br>• ಶಾಲೆಗಳು ತೆರೆದ ನಂತರ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ, ಅವರು ಎಲ್ಲ ಶಾಲಾ ದಿನಗಳಲ್ಲೂ ಹಾಜರಿರುವುದನ್ನು ಗಮನಿಸುವ ಅಗತ್ಯವನ್ನು ಮನಗಾಣಿಸಲು ಕ್ರಮಗಳನ್ನು ಕೈಗೊಳ್ಳುವುದು<br>• ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಪೌಷ್ಠಿಕ ಆಹಾರ ಮತ್ತು ಪೂರಕ ಪೌಷ್ಠಿಕಾಂಶಗಳು ಕ್ರಮಬದ್ಧವಾಗಿ ದೊರೆಯುವುದನ್ನು ಖಚಿತಪಡಿಸಿಕೊಳ್ಳುವುದು | • ಆಹಾರ (ಪೌಷ್ಟಿಕ ಆಹಾರ) ಮತ್ತು ಶಿಕ್ಷಣದ ಹಕ್ಕು ದೊರೆಯುವುದರ ಖಚಿತತೆ ಇಲ್ಲದಿರುವ ಸಮಯದಲ್ಲಿ ಅದರ ಕುರಿತು ಪ್ರಚಾರ | • ಅಂಗನವಾಡಿ ಕಾರ್ಯಕರ್ತರು ಮತ್ತು ಶಿಕ್ಷಕರಿಗೆ ಶಾಲೆ ಪುನರಾರಂಭವಾದ ನಂತರ ಮಕ್ಕಳನ್ನು ಸಂಭಾಳಿಸಲು ಸಾಮರ್ಥ್ಯ ಅಭಿವೃದ್ಧಿ<br>• ಅಂಗನವಾಡಿ ಕಾರ್ಯಕರ್ತರ ಅಗತ್ಯಗಳ ಮೇರೆಗೆ ಬೆಂಬಲ, ನೆರವು | • ಅಂಗವಾಡಿ ಕೇಂದ್ರಗಳ ಕಾರ್ಯಾಚರಣೆಯ ಮೇಲ್ವಿಚಾರಣೆ |
| | **ಶಾಲಾ ಶಿಕ್ಷಣ**<br>• ಶಾಲೆಗಳು ತೆರೆದ ನಂತರ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ, ಅವರು ಎಲ್ಲ ಶಾಲಾ ದಿನಗಳಲ್ಲೂ ಹಾಜರಿರುವುದನ್ನು ಗಮನಿಸುವ ಅಗತ್ಯವನ್ನು ಪೋಷಕರಿಗೆ ಮನಗಾಣಿಸಲು ಕ್ರಮಗಳನ್ನು ಕೈಗೊಳ್ಳುವುದು<br>• ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ/ಒಣ ಪಡಿತರದ ಕ್ರಮಬದ್ಧ ಒದಗಣೆಯನ್ನು ಖಚಿತಪಡಿಸಿಕೊಳ್ಳುವುದು<br>• ದುರ್ಗಮ ಹಾದಿಯಿರುವ ವಾಸಸ್ಥಳಗಳು, ವಲಸೆ ಕಾರ್ಮಿಕರ ಮಕ್ಕಳು, | • ಆರ್‌ಟಿಇ ಒದಗಣೆಗಳು ಮತ್ತು ನಿಯಮಗಳನ್ನು ಜಾರಿಗೆ ತರಲು ಆವಶ್ಯವಾದ ಹಣಕಾಸಿನ ಪರಿಮಾಣದಲ್ಲಿ ಕೊರತೆ ಕುರಿತು ಪ್ರಚಾರ | • ಶಾಲೆ ಪುನರಾರಂಭವಾದ ನಂತರ ಮಕ್ಕಳನ್ನು ಸಂಭಾಳಿಸಲು ಶಿಕ್ಷಕರಿಗೆ ಸಾಮರ್ಥ್ಯ ಅಭಿವೃದ್ಧಿ<br>• ಶಿಕ್ಷಕರ ಅಗತ್ಯಗಳ ಮೇರೆಗೆ ಬೆಂಬಲ, ನೆರವು | • ಶಾಲೆಗಳ ಕಾರ್ಯಾಚರಣೆಯ ಮೇಲ್ವಿಚಾರಣೆ |

| | | | | |
|---|---|---|---|---|
| | ಶಾಲೆಯಿಂದ ಹೊರಗಿರುವ ಮಕ್ಕಳು ಇತ್ಯಾದಿ ತೊಂದರೆಗಳಿರುವ (ಸರ್ಕಾರದ ನಿಲುಕಿಗೆ ಸಿಗದೇ ಇದ್ದ) ಮಕ್ಕಳಿಗೆ ಶೈಕ್ಷಣಿಕ ಮಧ್ಯಸ್ಥಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು<br>• ವಿದ್ಯಾರ್ಥಿಗಳು ಉನ್ನತ ಪ್ರೌಢ ಹಂತಗಳಿಗೆ ಪರಿವರ್ತಿತರಾದ ಮತ್ತು ಅಂತ್ಯಗೊಳಿಸಿದ ಅನುಪಾತಗಳನ್ನು ಗಮನಿಸುವುದು ಮತ್ತು ಹೊರಬಿದ್ದ ಅಥವಾ ಉದ್ಯೋಗಸ್ಥ ವಿದ್ಯಾರ್ಥಿಗಳಿಗೆ ಮಧ್ಯಸ್ಥಿಕೆ ಕ್ರಮಗಳನ್ನು ಯೋಜಿಸಿ ಅನುಷ್ಠಾನಿಸುವುದು<br>• ಶಾಲೆ ಮುಚ್ಚಿದ್ದರಿಂದ ಮಕ್ಕಳ ಮಾನಸಿಕ ಪರಿಣಾಮ ಕುರಿತು ಪೋಷಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳು<br>• ಸರ್ಕಾರೇತರ ಸಂಸ್ಥೆಗಳ ಮಧ್ಯಸ್ಥಿಕೆ ಕ್ರಮಗಳಲ್ಲಿ ಮಕ್ಕಳ ನೈಜ ಜೀವನಾನುಭವಗಳನ್ನು ಅಳವಡಿಸಿಕೊಳ್ಳಬೇಕು; ಅಧ್ಯಯನದಲ್ಲಿ ಆಸಕ್ತಿ ಕಳೆದುಕೊಂಡ ಮಕ್ಕಳಿಗೆ ವಿಭಿನ್ನ ಕಲಿಕಾ ತಂತ್ರಗಳು; ವಿಮರ್ಶನಾ ಸಂವಾದಗಳು, ಮನೆಯಲ್ಲಿ ಹಿಂಸೆ ಅಥವಾ ಆಕ್ರಮಣಕಾರಿ ವಾತಾವರಣವಿರುವ ಮಕ್ಕಳೊಡನೆ ಚರ್ಚೆ ಮತ್ತು ನಿರ್ದಿಷ್ಟ ಅವಧಿಗಳು | • ಮಧ್ಯಾಹ್ನದ ಬಿಸಿಯೂಟ/ಒಣ ಪಡಿತರ ಮತ್ತು ಶಿಕ್ಷಣ ದೊರೆಯುವುದರ ಖಚಿತತೆ ಇಲ್ಲದಿರುವ ಸಮಯದಲ್ಲಿ ಅದರ ಕುರಿತು ಪ್ರಚಾರ | | |
| ಕಲಿಕೆಯ ಪರಿಭಾಷೆಯನ್ನು ವಿಸ್ತರಿಸಿ, ಕಲಿಕೆಗಾಗಿ ಮಧ್ಯಸ್ಥಿಕೆ ಕ್ರಮಗಳನ್ನು ಆಯೋಜಿಸಿ ಅನುಷ್ಠಾನಕ್ಕೆ ತರುವುದು | • ಶಿಕ್ಷಕರಿಗಾಗಿ ಮಕ್ಕಳ ಸಮಗ್ರ ಕಲಿಕೆಯ ಕುರಿತು ಉಪಕರಣಚೀಲ (toolkit) ಗಳನ್ನು ಅಭಿವೃದ್ಧಿಗೊಳಿಸುವುದು<br>• ಕಲಿಕಾ ನಷ್ಟವನ್ನು ಭರಿಸಲು ಕಲಿಕಾ ಮಧ್ಯಸ್ಥಿಕೆ ಕ್ರಮಗಳು ವಿಶೇಷವಾಗಿ 3 - 5 ನೇ ತರಗತಿಗಳಿಗೆ | • ಲೋಕಸಭಾ ಸದಸ್ಯರು, ಸರ್ಕಾರೇತರ ಸಂಸ್ಥೆಗಳು, ವಿದ್ವಾಂಸರು ಇತ್ಯಾದಿ ವ್ಯಕ್ತಿಗಳೊಡನೆ ಸಮಗ್ರ ಕಲಿಕೆಯ ಕುರಿತು ಚರ್ಚೆ ಮತ್ತು ಸಂವಾದ | • ಮಕ್ಕಳ ಸಮಗ್ರ ಕಲಿಕೆ ವಿಷಯದ ಮೇಲೆ ಶಿಕ್ಷಕರ ತರಬೇತಿ | • ನೀತಿ ಸಂಕ್ಷಿಪ್ತ ವಿವರಣೆ ಮತ್ತು ಕ್ಷೇತ್ರ ಸಮೀಕ್ಷೆಗಳ ಮೂಲಕ ಕಲಿಕೆಯ ಸಂಕುಚಿತ ಪರಿಭಾಷೆಯನ್ನು ಒತ್ತಿ ಹೇಳುವುದು |

**ಗಮನಿಸಿ:** ನಿರ್ದಿಷ್ಟ ಶಿಫಾರಸ್ಸುಗಳು ಸೂಚಕ ಅಂಶಗಳಾಗಿವೆ. ಟಾಟಾ ಟ್ರಸ್ಟ್‌ನ ಪ್ರಾವೀಣ್ಯತೆಯ ಮೇರೆಗೆ ಹೆಚ್ಚು ನಿರ್ದಿಷ್ಟ ಚಟುವಟಿಕೆಗಳನ್ನು ಯೋಜಿಸಬಹುದು